**OS.No**.102/2022 **DW**-1

**ದಿನಾಂಕಃ 20.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿಯ ಪರ ಶ್ರೀ. ಎಂ ಈ .ಎಸ್. ವಕೀಲರಿಂದಃ**

ವಾದಿ ನನ್ನ ಮೈದುನ. ವಾದಿ ನನ್ನ ಗಂಡನ ಸ್ವಂತ ತಮ್ಮ ಎಂದರೆ ಹೌದು. ಜವರೇಗೌಡರಿಗೆ ಗಂಡು ಮಕ್ಕಳು ಇಲ್ಲದೆ ಇದ್ದುದರಿಂದ ವಾದಿಯನ್ನು ಸಾಕು ಮಗನಾಗಿ ಸಾಕುತ್ತಿದ್ದರು ಎಂದರೆ ಗೊತ್ತಿಲ್ಲ. ಜವರೇಗೌಡರ ಕಡೆಯಿಂದ ನಾನು ಮೃತ್ಯು ಪತ್ರ ಮಾಡಿಸಿಕೊಂಡಿದ್ದೇನೆ, ಆ ಪ್ರಕಾರ ನನಗೆ ಆಸ್ತಿ ಬರಬೇಕು ಎಂದು ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನಿಪಿ 16 ರಲ್ಲಿರುವ ಫೋಟೋ ಜವರೇಗೌಡರದ್ದು ಎಂದರೆ ಹೌದು. ಜವರೇಗೌಡರೇ ನಿಪಿ 16 ರಂತೆ ಮರಣ ಶಾಸನ ಮಾಡಿರುತ್ತಾರೆ ಎಂದರೆ ಸುಳ್ಳು. ನಾನು ವಾದಿಯನ್ನು ಚಿಕ್ಕಂದಿನಿಂದಲೂ ಸಾಕು ಮಗನಾಗಿ ಸಾಕಿದ್ದು, ಈಗ ಅವನೇ ನನ್ನನ್ನು ನೋಡಿಕೊಳ್ಳುತ್ತಿದ್ದು ಮುಂದೆ ನನ್ನ ಉತ್ತರಾಧಿಕ್ರಿಯಾಗಳನ್ನು ವಾದಿಯೇ ಮಾಡಬೇಕು ಎಂದು ಹೇಳಿ ಜವರೇಗೌಡರು ದಾವಾ ಆಸ್ತಿಗಳನ್ನು ವಿಲ್ ಮೂಲಕ ವಾದಿಗೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಿಲ್ ಮಾಡುವ ಸಮಯದಲ್ಲಿ ಜವರೇಗೌಡರು ಒಳ್ಳೆಯ ಆರೋಗ್ಯವಂತರಾಗಿದ್ದು ಅವರ ಪಂಚೇಂದ್ರಿಯಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಯಾರ ಚಿತಾವಣೆಗೂ ಒಳಗಾಗದೆ ಸ್ವಇಚ್ಚೆಯಿಂದ ವಾದಿಯ ಹೆಸರಿಗೆ ಮರಣ ಶಾಸನ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಗುಳ್ಳದಪುರ ಗ್ರಾಮದ ಸರ್ವೆ ನಂ 4/2 ರಲ್ಲಿಯ ಒಟ್ಟು 7 ಎಕರೆ 32 ಗುಂಟೆಯ ಪೈಕಿ ತನಗೆ ಸೇರಿದ ಅರ್ಧ ಹಿಸ್ಸೆಯ ಅಂದರೆ 3 ಎಕರೆ 36 ಗುಂಟೆಯ ಪೈಕಿ 3 ಎಕರೆ ಆಸ್ತಿಯನ್ನು ಜವರೇಗೌಡರು ತನ್ನ ಸ್ವಾಧೀನದಲ್ಲಿ ಇದ್ದ ಆಸ್ತಿಯನ್ನು ವಾದಿಗೆ ವಿಲ್ ಬರೆದು ಕೊಟ್ಟಿರುತ್ತಾರೆ ಎಂದರೆ ಸುಳ್ಳು, ಸಾಕ್ಷಿ ಮುಂದುವೆರೆದು ಜವರೇಗೌಡರು ಆ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಆದರೆ ಯಾವುದೇ ಮರಣ ಶಾಸನ ಬರೆದುಕೊಟ್ಟಿಲ್ಲ ಎಂದು

ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕು ಬಂದಿಯಂತೆ ಪೂರ್ವಕ್ಕೆ ತೋರಿಸಿರುವ ಸಾಕಮ್ಮ ಅವರು ನನ್ನ ಅತ್ತೆಯೆಂದರೆ ಸಾಕ್ಷಿ ಸಾಕಮ್ಮ ನನ್ನ ಅತ್ತೆ ಆದರೆ ನಾನು ಯಾವುದೇ ವಿಭಾಗ ಆಗಿರುವುದಿಲ್ಲ, ಅಲ್ಲದೆ ಜವರೇಗೌಡ ಮತ್ತು ಸಾಕಮ್ಮ ಅವರದ್ದು ಸರ್ವೆ ನಂ 4/2 ರಲ್ಲಿ ಒಟ್ಟಿಗೆ 7 ಎಕರೆ 32 ಗುಂಟೆ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ರಸ್ತೆ ಬರುತ್ತದೆ ಎಂದರೆ ಸಾಕ್ಷಿ 3 ಎಕರೆ ಯಾವುದೇ ವಿಭಾಗ ಆಗಿಲ್ಲ ಒಟ್ಟು 7 ಎಕರೆ 32 ಗುಂಟೆಯ ಪಶ್ಚಿಮಕ್ಕೆ ರಸ್ತೆ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ಜವರೇಗೌಡರ ಮತ್ತು ಶಿವರಾಮೇಗೌಡರ ಜಮೀನು ಬರುತ್ತದೆ ಎಂದರೆ ಸಾಕ್ಷಿ 3 ಎಕರೆಯದ್ದು ಅಲ್ಲ, 7 ಎಕರೆ 32 ಗುಂಟೆಯ ಉತ್ತರಕ್ಕೆ ಆಲದ ಹಳ್ಳಿಯ ಜವರೇಗೌಡರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣಕ್ಕೆ ತಿಮ್ಮೇಗೌಡ ಮತ್ತು ಕಾಳೇಗೌಡರ ಜಮೀನು ಬರುತ್ತದೆ ಎಂದರೆ ಸಾಕ್ಷಿ ಒಟ್ಟು 3 ಎಕರೆ 32 ಗುಂಟೆ ಜಮೀನಿನ ದಕ್ಷಿಣಕ್ಕೆ ಕಾಳಯ್ಯನ ಪರಮೇಶ ಹಾಗೂ ದಾಸೇಗೌಡರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ಜವರೇಗೌಡರು ತಮಗೆ ಹಕ್ಕು ಇದ್ದಂತಹ 3 ಎಕರೆ 36 ಗುಂಟೆಯ ಪೈಕಿ 3 ಎಕರೆ ಜಮೀನನ್ನು ದಿಃ16.09.2005 ರಂದು ನೊಂದಾಯಿತ ಮೃತ್ತ ಪತ್ರದ ಮೂಲಕ ವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಗ ಜವರೇಗೌಡರು ಪ್ರತ್ಯೇಕವಾಗಿ 3 ಎಕರೆ 36 ಗುಂಟೆಯನ್ನು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ.

ಮೃತ್ತ ಪತ್ರದ ಪ್ರಕಾರ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಒಟ್ಟಾಗಿಯೇ ಒಟ್ಟು ಜಮೀನನ್ನು ಅನಭವಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಡಿ 2 ದಾಖಲಾತಿಯನ್ನು 2011 ನೇ ಇಸವಿಯಲ್ಲಿ ಜವರೇಗೌಡರ ಹೆಣ್ಣು ಮಕ್ಕಳು ನಮಗೆ ಮಾಡಿಕೊಟ್ಟಿರುತ್ತಾರೆ. ಸರ್ವೆ ನಂ 4/2 ರಲ್ಲಿಯ 1 ಎಕರೆ 28

ಗುಂಟೆಗೆ ಸಂಬಂಧ ಪಟ್ಟಂತೆ ಜವರೇಗೌಡರ ಹೆಣ್ಣು ಮಕ್ಕಳು ಹಕ್ಕು ಖುಲಾಸೆ ಮಾಡಿಕೊಟ್ಟಿರುತ್ತಾರೆ. ನಿಡಿ 2 ರಲ್ಲಿ ಸರ್ವೆ ನಂಬರ್ ಹಾಗೂ ಕ್ಷೇತ್ರ ನಮೂದು ಮಾಡಿದ್ದಾರೆ. ಯಾವ ಸರ್ವೆ ನಂಬರ್ ಗೆ ಸಂಬಂಧ ಪಟ್ಟಂತೆ ಹಾಗೂ ಎಷ್ಟು ವಿಸ್ತೀರ್ಣಕ್ಕೆ ಎಂದು ನಿಡಿ 2 ರಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಿಡಿ 2 ರ ಆಧಾರದ ಮೇಲೆ ಮೇಲ್ಮನವಿಯನ್ನು ಎಸಿ ಕಛೇರಿಗೆ ಸಲ್ಲಿಸಿದ್ದೆ ಎಂದರೆ ಹೌದು. ನಿಡಿ 2 ರಲ್ಲಿ ಸರ್ವೆ ನಂಬರ್ ಹಾಗೂ ವಿಸೀರ್ಣ ಇಲ್ಲದೇ ಇದ್ದರು ಸಹಿತ ಎಸಿ ಕಛೇರಿಯಲ್ಲಿ ಅಧಿಕಾರಿಗಳೊಂದಿಗೆ ಷರೀಕ್ಕಾಗಿ ಕೇವಲ ಆದೇಶದಲ್ಲಿ ಮಾತ್ರ ಸರ್ವೆ ನಂಬರ್ ಹಾಗೂ ವಿಸೀರ್ಣವನ್ನು ಸೇರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ರಲ್ಲಿ ಸರ್ವೆ ನಂ ಹಾಗೂ ವಿಸ್ತೀರ್ಣ ಇಲ್ಲದೆ ಇರುವುದರಿಂದ ಎಸಿ ಅವರಿಗೆ ಅವರನ್ನು ಸೇರಿಸಿ ಆದೇಶ ಮಾಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ವಿಭಾಗ ಪತ್ರ ಮತ್ತು ಕ್ರಯ ಪತ್ರದಲ್ಲಿ ಎಲ್ಲಾ ವಿಚರಣೆಗಳು ಇವೆ ಎಂದು ನುಡಿಯುತ್ತಾರೆ. ವಿಭಾಗ ಪತ್ರ ಮತ್ತು ಕ್ರಯ ಪತ್ರವನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದೇನೆ.

ಎಸಿ ನ್ಯಾಯಾಲಯದ ಆದೇಶದ ವಿರುದ್ಧ ಜಯಮ್ಮ ಮತ್ತು ಕಲ್ಯಾಣಮ್ಮ ಅವರು ಡಿಸಿ ಕಛೇರಿಯ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಮಗೆ ಯಾವುದೇ ನೋಟೀಸು ಬಂದಿಲ್ಲ ಎಂದು ನುಡಿಯುತ್ತಾರೆ. ಜಿಲ್ಲಾಧಿಕಾರಿಗಳು ಎಸಿ ಅವರಿಗೆ ಪ್ರಕರಣವನ್ನು ರಿಮಾಂಡ್ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಖರೀದಿ ಮಾಡಿರುವ ಆಸ್ತಿ ನನ್ನ ಮಾವ ಚಲುವೇಗೌಡ ಅವರಿಗೆ ಸೇರಿದ ಒಟ್ಟು ಕುಟುಂಬದ ಆಸ್ತಿಯೆಂದರೆ ಆಸ್ತಿ ಎಂದರೆ ಸಾಕ್ಷಿ ಅಲ್ಲ ಅದು ಜವರೇಗೌಡರ ಆಸ್ತಿ ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.